ಕೂತಿದ್ದೀನಿ...' ಎನ್ನುತ್ತ ನಕ್ಕರು.

ಜಗನ್ನಾಥ್, ನೀವೆಲ್ಲಿ ಸೆಟ್ಲ್ ಆಗಿದ್ದೀರಿ ಎಂದು ಕೇಳುತ್ತ ಇಬ್ಬರ ಕುಟುಂಬದವರ ಬಗ್ಗೆ ವಿವರವಾಗಿ ವಿಚಾರಿಸಿದರು. ಆಮೇಲೆ ಸಂತೋಷ, ಅಲ್ಲಾ ಎಲ್ಲರನ್ನೂ ಚೆನ್ನಾಗಿ ಇಟ್ಟಿರಲಿ ಅಂದರು. ಓದುವಾಗ ನಾನು ತುಂಬಾ ರಫ್ ಆಗಿದ್ದೆ. ನಿಮ್ಮನ್ನು ಚುಡಾಯಿಸಿ ಗೋಳು ಹೊಯ್ಕೊಳ್ತಿದ್ದೆ... ಎನ್ನುತ್ತ ನಕ್ಕರು. 'ಈಗ ನಾನು ನಮ್ಮ ಮಹ್ಮಡನ್ ಸಮಾಜದ ಜನರಿಗೆ ಹಿರಿಯ. ಸಮಸ್ಯೆಗಳನ್ನು ಹೇಳಿಕೊಂಡು ಪರಿಹಾರ ಕೊಡಿಸಿ ಅಂತ ನಮ್ಮವರು ಬರ್ತಾರೆ. ಈಗ ದೇಶದಲ್ಲಿ ಏನಾಗ್ತಿದೆ ಅನ್ನೋದು ನಿಮಗೂ ಗೊತ್ತಲ್ಲ. ಕಾಲು ಕೆರಕಂಡು ಜಗಳಕ್ಕೆ ಬರೋರು ಜಾಸ್ತಿ ಆಗಿದ್ದಾರೆ. ನಮ್ಮವರೇನೂ ಕಡಿಮೆ ಇಲ್ಲ. ಜಗಳಕ್ಕೆ ರೆಡಿ ಅಂತ ಕಾಯ್ಕಂಡು ಕೂತಿದ್ದಾರೆ. ಅಂಥವರನ್ನು ಸಮಾಧಾನ ಮಾಡುವಷ್ಟರಲ್ಲೇ ನನ್ನ ಟೈಂ ಹೋಗಿ ಬಿಡುತ್ತೆ...' ಅಂದರು.

ನಮ್ಮ ಜತೆ ಓದ್‌ತಿದ್ದವರೆಲ್ಲ ಏನೋ ಒಂದು ಕಸುಬು ಮಾಡಿಕೊಂಡು ನಮ್ಮ ಜೀವನ ನಮ್ಮದು ಅನ್ನೋ ಹಂಗೆ ಎಲ್ಲೆಲ್ಲೋ ಇದ್ದಾರೆ. ಕೆಲವರು ನಮ್ಮ ಅಂಗಡಿಗೆ ಕಬ್ಬಿಣ, ಸಿಮೆಂಟು ಖರೀದಿಗೆ ಬರ್ತಾರೆ. ಕೆಲವರು ಪೇಟೆಯಲ್ಲಿ ಎದುರಿಗೆ ಕಂಡಾಗ ವಿಶ್ವಾಸದಿಂದ ಮಾತಾಡಿಸ್ತಾರೆ. ಮೂರು ವರ್ಷಗಳ ಹಿಂದೆ ವಿಷ್ಣು ಭಟ್ಟರು ಹೋಗಿಬಿಟ್ಟರು. ಕ್ಯಾನ್ಸರ್ ಆಗಿತ್ತು ಮಾರಾಯರೇ, ಕೊನೆ ದಿನಗಳಲ್ಲಿ ತುಂಬಾ ಸಫರ್ ಮಾಡಿದ್ರು. ನಿಮಗೆ ನೆನಪಿರಬೇಕು, ನಾನು ಅವರ ಪೈಕಿಯ ಹುಡುಗಿಯೊಬ್ಬಳನ್ನು ಚುಡಾಯಿಸಿದೆ ಅಂತ ಯಾರೋ ಹೇಳಿದ ಚಾಡಿ ಮಾತು ಕೇಳಿ ಭಟ್ಟರು ನಂಗೆ ಹೊಡೆಸೋಕೆ ಜನ ಕಳಿಸಿದ್ದರು! ನಾನು ತಪ್ಪಿಸಿಕೊಂಡು ಭದ್ರಾವತಿಗೆ ಓಡಿ ಹೋಗಿದ್ದೆ. ಪರೀಕ್ಷೆಗೂ ಬರಲಿಲ್ಲ. ನನ್ನದು ಪಿಯುಸಿ ಕಂಪ್ಲೀಟ್ ಆಗಲಿಲ್ಲ. ಸಾಯೋದಕ್ಕೆ ಒಂದು ವಾರ ಮೊದಲು ನನ್ನ ನೋಡಬೇಕು ಅಂತ ಅವರ ಮಗನ ಕೈಲಿ ಹೇಳಿ ಕಳ್ಸಿದ್ದರು. ಅವತ್ತೇ ಸಂಜೆ ಅವರ ಮನೆಗೆ ಹೋಗಿದ್ದೆ. ತುಂಬಾ ಹೊತ್ತು ನನ್ನ ಪಕ್ಕದಲ್ಲೇ ಕೂತು ಮಾತಾಡಿದರು. ನನ್ನ ಕೈಹಿಡಿದುಕೊಂಡು ನನ್ನ ಮಾಫ್ ಮಾಡು ರಫೀಕ್ ಅಂದರು. ಕೊನೆಯ ದಿನಗಳಲ್ಲಿ ಅವರು ತುಂಬಾ ಬದಲಾಗಿದ್ದರು ಎಂದು ಹೇಳಿ ನಿಟ್ಟುಸಿರು ಬಿಡುತ್ತ ಮನುಷ್ಯನ ಜೀವನ ಇಷ್ಟೇ ಎಂದರು.

'ನಮ್ಮ ಜತೆ ಓದ್ತಿದ್ದ ಹೆಣ್ಮಕ್ಕಳು ಮೊದಲೂ ನನ್ನ ಜತೆ ಮಾತಾಡ್ತಿರಲಿಲ್ಲ. ಈಗ ಮುದುಕಿಯರಾಗಿದ್ದಾರೆ, ಆದರೂ ಮಾತಾಡಿಸಲ್ಲ. ನಿಮಗೆ ವೈದೇಹಿ ನೆನಪಿದೆಯಾ? ಸೈನ್ಸ್ ಸೆಕ್ಷನ್‌ನಲ್ಲಿದ್ದರು. ತೆಳ್ಳಗೆ, ಬೆಳ್ಳಗೆ ನಿಮ್ಮ ದುಡ್ಡಿನ ದೇವರು ಮಹಾಲಕ್ಷ್ಮಿ ಥರಾನೆ ಇದ್ದರು! ಈಚೆಗೆ ಅವರು ನನ್ನ ಮೊಮ್ಮಗಳ ಮದುವೆ ಇದೆ. ನೀವು ಬರಲೇಬೇಕು ರಫೀಕ್ ಸಾಹೇಬರೇ ಅಂತ ಅಂಗಡಿಗೆ ಬಂದು ಪತ್ರಿಕೆ ಕೊಟ್ಟು ಹೋಗಿದ್ದರು. ಮದುವೆಗೆ ಹೋಗಿದ್ದೆ. ಹುಡುಗ ಬೆಂಗಳೂರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಅಂತೆ. ತುಂಬಾನೆ ಲಕ್ಷಣವಾದ ಹುಡುಗ. ನನ್ನ ಕಾಲು ಮುಟ್ಟಿ ನಮಸ್ಕಾರ ಮಾಡಿದ ಅಂದರು.

ನಲವತ್ತು ವರ್ಷಗಳಲ್ಲಿ ಕೊಪ್ಪ ಸಾಕಷ್ಟು ಬದಲಾಗಿದೆ. ನಾವು ಹುಡುಗರಾಗಿದ್ದಾಗ ಹೇಗಿತ್ತು? ಈಗ ಹೇಗಾಗಿದೆ ನೋಡಿ! ದಿನಗಳು ಕಳೆದಂತೆ ಜನ, ನಂಬಿಕೆ ವಿಶ್ವಾಸಗಳನ್ನು ಕಳಕೊಂಡಿದ್ದಾರೆ ಎಂದು ಹೇಳಿ ನಿಟ್ಟುಸಿರು ಬಿಟ್ಟರು. ತಲೆಯ ಮೇಲಿದ್ದ ಟೋಪಿಯನ್ನು ತೆಗೆದು ಕರ್ಚೀಫ್‌ನಿಂದ ಹಣೆ, ನೆತ್ತಿ ಒರೆಸಿಕೊಂಡರು. ನೆತ್ತಿ ಮೇಲೆ ಕೆಲವೇ ಕೂದಲು ಉಳಿದಿವೆ!. ಪಿಯುಸಿ ಓದುವಾಗ ಕೂದಲನ್ನು ನೀಟಾಗಿ ಬಾಚಿ, ಅತ್ತರು ಪೂಸಿಕೊಂಡು ಹುಡುಗಿಯರು ನೋಡಲಿ ಅಂತ ಅತ್ತಿತ್ತ ಠಳಾಯಿಸುತ್ತಿದ್ದ ರಫೀಕ ಮುದುಕನಾದ ಮೇಲೆ ತುಂಬಾ ಗಂಭೀರ ಸ್ವಭಾವದವನಾಗಿದ್ದಾನೆ ಎಂದು ಸತ್ಯನಿಗೆ ಅನ್ನಿಸಿತು.

'ಎಷ್ಟು ದಿನ ಇಲ್ಲಿ ನಿಮ್ಮ ಕ್ಯಾಂಪು? ಒಂದು ದಿನ ಬಿಡುವು ಮಾಡಿಕೊಳ್ಳಿ ಮಾರಾಯ್ರೆ, ಎಲ್ಲರೂ ಒಟ್ಟಿಗೆ ಊಟ ಮಾಡುವ. ಮತ್ತೆ ನಾವು ಭೇಟಿಯಾಗ್ತಿವೋ ಇಲ್ಲವೋ. ಎಲ್ಲರಿಗೂ ವಯಸ್ಸಾಗಿದೆ. ನನ್ನ ಸಮಯ ಮುಗೀತಾ ಬಂದಿದೆ...' ಎಂದು ಹೇಳುತ್ತ ನಕ್ಕರು.

'ನಮ್ಮ ಜತೆ ಓದಿದೋರನ್ನೆಲ್ಲ ರೀಯೂನಿಯನ್ ಹೆಸರಲ್ಲಿ ಒಟ್ಟಿಗೆ ಸೇರಿಸಿ ಒಂದು ಫಂಕ್ಷನ್ ಮಾಡಬೇಕು ಅಂತ ನಾರ್ವೇಕರ್ ಪ್ಲಾನ್ ಮಾಡಿದ್ದಾನೆ. ಇನ್ನೂ ಎಂಟ್ಹತ್ತು ದಿನ ಇರ್ತೀನಿ. ಊರಿಗೆ ಹೋಗಿ ಬಂದ ಮೇಲೆ ಮತ್ತೆ ಸಿಕ್ತೀನಿ ಎಂದು ಹೇಳುತ್ತ ನಾವಿನ್ನು ಹೊರಡ್ತೀವಿ ಎನ್ನುತ್ತ ಸತ್ಯ ಎದ್ದು ನಿಂತ. ರಫೀಕ್ ಸಾಬರೂ ಎದ್ದು ನಿಂತು ಇಬ್ಬರನ್ನೂ ಆಲಂಗಿಸಿಕೊಂಡು ಬೀಳ್ಕೊಟ್ಟರು. ರಫೀಕನ ನಡವಳಿಕೆಯಿಂದ ಇಬ್ಬರೂ